ಶ್ರೀ ಹೆಚ್. ವಿಶ್ವನಾಥ್ (ಸಹಕಾರಿ ಸಚಿವರು):

ಅ) ಎ. ವರ್ಗ 9538
ಬಿ. ವರ್ಗ 50
ಸಿ. ವರ್ಗ -
ಡಿ. ವರ್ಗ 43
ಇ. ವರ್ಗ -
ಒಟ್ಟು 9631

ಆ) 314

ಇ) 213

ಈ) ಹಾವೇರಿ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು, ಬ್ಯಾಡಗಿ ಹಾಗೂ ಹಾವೇರಿ (5 ಗ್ರಾಮಗಳು) ತಾಲ್ಲೂಕುಗಳು ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು.

ಒಟ್ಟು ಸದಸ್ಯರು 9613

ಉ) ಕಾರ್ಖಾನೆ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸಿರುತ್ತಿದೆ. 2000-01ನೇ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 30-9-2001ರೊಳಗೆ ನಡೆಸಬೇಕಾಗಿದ್ದು, ಬರಗಾಲ ಪರಿಸ್ಥಿತಿ ಕಾರಣ ಹಾಗೂ ಸ್ಥಾಪನೆ ಕೆಲಸ ಆರಂಭದ ಹಂತದಲ್ಲಿದ್ದು ಮಿತವ್ಯಯ ದೃಷ್ಟಿಯಿಂದ ಸೆಪ್ಟೆಂಬರ್ 2002ರೊಳಗೆ ನಡೆಸಲು ಅನುಮತಿ ನೀಡಲಾಗಿದೆ.

ಬಾಪೂಜಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ

1396 (1770) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಾಪೂಜಿ ಕೋಆಪಕೇಟಿವ್ ಹೌಸಿಂಗ್ ಸೊಸೈಟಿ ಲಿ, ಜಾಪೂಜಿನಗರ, ಮೈಸೂರು ರಸ್ತೆ, ಬೆಂಗಳೂರು, ಈ ಸೊಸೈಟಿಯು ಚಂದ್ರಾಲೇಔಟ್‌ನಲ್ಲಿ ಜಮೀನನ್ನು ಖರೀದಿಸಿ ಮನೆ ನಿವೇಶನಗಳನ್ನು ರಚಿಸಿ, 1982-83 ರಿಂದ ಸೊಸೈಟಿಯ ಆದೇಶದಂತೆ ಕಾಲಕಾಲಕ್ಕೆ ಸರಿಯಾಗಿ ಹಣ ಪಾವತಿ ಮಾಡಿದ, ತನ್ನ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚುತ್ತಿದೆಯೇ?

2) ಸದರಿ ಸೊಸೈಟಿಯವರು ಎಷ್ಟು ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ರಚಿಸಿದ್ದಾರೆ, ಈವರೆಗೆ ತನ್ನ ಎಷ್ಟು ಜನ ಸದಸ್ಯರಿಗೆ ನಿವೇಶನಗಳನ್ನು ಹಂಚಿದ್ದಾರೆ.

3) ಈ ಹೌಸಿಂಗ್ ಸೊಸೈಟಿಯಲ್ಲಿ ಸಹಕಾರ ಸಂಘಗಳ ಕಾಯ್ದೆಯನ್ನು ಹಾಗೂ ಕಾನೂನುಗಳನ್ನು ಉಲ್ಲಂಘಿಸಿ ಹೊರಗಿನವರಿಗೆ ಹೆಚ್ಚಿನ ಹಣ್ಣಕ್ಕೆ ನಿವೇಶನಗಳನ್ನು ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದರೆ, ಅರ್ಹರಿಲ್ಲದ ಸದಸ್ಯರುಗಳಿಗೆ ಅಕ್ರಮವಾಗಿ ನೀಡಿರುವ ನಿವೇಶನಗಳ ನೋಂದಣಿಯನ್ನು ರದ್ದುಗೊಳಿಸಿ ಅರ್ಹ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

5) ಸಹಕಾರ ಸಂಘಗಳ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿ ಎಲ್ಲಾ ರೀತಿಯ ಅವ್ಯವಹಾರಗಳನ್ನು ಮಾಡಿರುವ ಮೇಲ್ಕಂಡ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ನಿರ್ದೇಶಕರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

6) ಈ ಸೊಸೈಟಿಯಲ್ಲಿ ಹಣ ಕಟ್ಟಿ ನಿವೇಶನಕ್ಕಾಗಿ ಕಾಯುತ್ತಿರುವವರ ಸಂಖ್ಯೆ ಎಷ್ಟು? ಇವರ ವಿವರಗಳನ್ನು ನೀಡುವುದು.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

1) ಹೌದು

2) ಸಂಘವು ಚಂದ್ರಾ ಬಡಾವಣೆಯಲ್ಲಿ 20 ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ರಚಿಸಿ 332 ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಿದೆ.

3) ಇಲ್ಲ

4) ಈ ಬಗ್ಗೆ ಅರ್ಹರಲ್ಲದ ಸದಸ್ಯರಿಗೆ ನೀಡಿರುವ ನಿವೇಶನ ಹಂಚಿಕೆಯನ್ನು ಪುನರ್ ಪರಿಶೀಲಿಸಿ, ಜೇಷ್ಠತೆಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲು ಸಂಘದ ಆಡಳಿತ ಮಂಡಳಿಗೆ ಕಾಯ್ದೆ ಕಲಂ 68 ರನ್ವಯ ನಿರ್ದೇಶನ ನೀಡಲಾಗಿದೆ.

5) ಸಹಕಾರ ಸಂಘಗಳ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿ, ಅವ್ಯವಹಾರಗಳನ್ನು ಮಾಡಿರುವ ಮೇಲ್ಕಂಡ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ನಿರ್ದೇಶಕರುಗಳ ಮೇಲೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಸಹಕಾರ ಸಂಘಗಳ ಕಾಯ್ದೆ ಕಲಂ 65 ರನ್ವಯ ಜರುಗಿರ ಪರಿವೀಕ್ಷಣೆಯಲ್ಲಿ ಸಂಘದಲ್ಲಿ ರೂ.4.57 ಕೋಟಿಹಣ ದುರುಪಯೋಗವಾಗಿದ್ದು, ಸಂಘದ ಪದಾಧಿಕಾರಿಗಳು ಹಾಗೂ ನಿರ್ದೇಶಕರ ವಿರುದ್ಧ ಕಲಂ 69 ರಂತೆ ಅಧಿಭಾರ ಕ್ರಮ ಜರುಗಿಸಿ, ಹಣ ವಸೂಲಾತಿಗೆ ಆದೇಶ ಹೊರಡಿಸಲಾಗಿದೆ.

ಆ) ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹೊಂದಿರುವ ಸ್ಥಿರಾಸ್ತಿಗಳನ್ನು ಕಲಂ 103 ರಂತೆ ಆದೇಶ ಪೂರ್ವದಲ್ಲಿ ಜಪ್ತಿ ಮಾಡಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಇ) ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವಿರುದ್ಧ ರೂ.4.57 ಕೋಟಿ ಹಣ ದುರುಪಯೋಗದ ಕಾರಣ ಕ್ರಿಮಿನಲ್ ಮೊಕದ್ದಮೆಯನ್ನು ಆರಕ್ಷಕ ಠಾಣೆಯಲ್ಲಿ ಹೂಡಿದ್ದು, ಅವರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ವಶಕ್ಕೆ ನೀಡಲಾಗಿತ್ತು. ಇವರನ್ನು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಮೊಕದ್ದಮೆಯು ವಿಚಾರಣೆಯಲ್ಲಿರುತ್ತದೆ.

ಈ) ಸಂಘದ ಆಡಳಿತ ಮಂಡಳಿಯು ನಡೆಸಿದ ಅವ್ಯವಹಾರಗಳ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಳಿ ರದ್ದುಗೊಳಿಸಲು ಕಲಂ 30(1) ರಂತೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

6) ಈ ಸಂಘದಲ್ಲಿ 225 ಸದಸ್ಯರು ನಿವೇಶಕ್ಕಾಗಿ ಪೂರ್ಣ ಹಣ ಪಾವತಿಸಿ ಕಾಯುತ್ತಿದ್ದಾರೆ.